**ಓ.ಎಸ್‌ಃ 347/2013**
**ಪಿ.ಡಬ್ಲ್ಯೂಃ 01**

**<u>ದಿನಾಂಕಃ 06-01-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಎಸ್‌.ಎ.ವೈ ವಕೀಲರಿಂದಃ</u>**

**1**. ನಾನು ಸುಮಾರು 20 ವರ್ಷಗಳಿಂದ ವಕೀಲ ವೃತ್ತಿಯಲ್ಲಿದ್ದೇನೆ ಎಂದರೆ ಸರಿ. ನನ್ನ ಜಮೀನಿನ ಸ.ನಂಬರ 184/ಬ/1/ಬ, ಅದು 16 ಎಕರೆ, 5 ಗುಂಟೆ ವಿಸ್ತೀರ್ಣ ಹೊಂದಿದೆ. ಸದರಿ ಸ್ವತ್ತನ್ನು ನನ್ನ ತಂದೆಯವರು ಖರೀದಿಸಿದ್ದಾರೆ. ಸದರಿ ಸ್ವತ್ತಿನ ಮೂಲ ಮಾಲೀಕರು ವಾಲೀಕರ ಎನ್ನುವವರಾಗಿರುತ್ತಾರೆ. ಸದರಿ ಸ್ವತ್ತು ವಾಲೀಕರ ಕುಟುಂಬಕ್ಕೆ ಪೂರ್ವಜರ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ನನ್ನ ತಂದೆ ಖರೀದಿಸಿದ ಖರೀದಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಸದರಿ ದಾಖಲೆಯನ್ನು ಈ ದಾವೆಯಲ್ಲಿ ಸಲ್ಲಿಸುವ ಅವಶ್ಯಕತೆ ಇಲ್ಲದ ಕಾರಣ ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ.

**2.** ಸದರಿ ಖರೀದಿ ಪತ್ರದಲ್ಲಿ ಯಂಭತ್ತನಾಳದಿಂದ ಶಿವಣಗಿ ಗ್ರಾಮಗಳಿಗೆ ಹೋಗುವ ರಸ್ತೆಯ ಬಗ್ಗೆ ನಮೂದು ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ನನ್ನ ತಂದೆ ಖರೀದಿಸಿದ ಖರೀದಿ ಪತ್ರವನ್ನು ನೋಡಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಖರೀದಿ ಪತ್ರದಲ್ಲಿ ಯಂಭತ್ತನಾಳದಿಂದ ಶಿವಣಗಿ ಗ್ರಾಮಗಳಿಗೆ ಹೋಗುವ ರಸ್ತೆಯ ಬಗ್ಗೆ ನಮೂದು ಇದೆ ಎಂದರೆ ಸಾಕ್ಷಿಯು ನಾನು ಖರೀದಿ ಪತ್ರವನ್ನು ನೋಡಿಲ್ಲ ಎಂದು ಉತ್ತರಿಸುತ್ತಾರೆ.

**3.** ಈ ದಾವೆಯನ್ನು ನಾನು ಸಲ್ಲಿಸುವ ಮುನ್ನ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ತಹಶೀಲ್ದಾರರು ನನ್ನ ಮತ್ತು ಪ್ರತಿವಾದಿಗಳ ಜಮೀನುಗಳ ನಡುವೆಯಿರುವ ರಸ್ತೆಗಳ ಬಗ್ಗೆ ತನಿಖೆಯನ್ನು ಮಾಡಿದ್ದರು ಎಂದರೆ ಸರಿ. ಸದರಿ ತನಿಖೆಯು ಕೊನೆಯ ಹಂತದಲ್ಲಿದ್ದಾಗ

ನಾನು ತಹಶೀಲ್ದಾರರಿಗೆ ನನ್ನ ಜಮೀನಿನಲ್ಲಿ ಕಾಲುದಾರಿಯಿದೆ ಎಂದು ನಾನು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿ. ಆದರ ಪ್ರಕಾರ ಕಾಲುದಾರಿ ಎಂದರೆ 8 ಪೂಟ್, 3 ಇಂಚು ಅಗಲ ಇರುವ ಒಂದು ಕಾಲುದಾರಿ ಎಂದು ತಹಶೀಲ್ದಾರರು ಆದೇಶ ಮಾಡಿದ್ದು ಅದನ್ನು ನಾನು ಒಪ್ಪಿಕೊಂಡಿದ್ದೇನೆ ಎಂದು ನುಡಿಯುತ್ತಾರೆ.

**4.** ಸರ್ವೇ ದಾಖಲೆಗಳು ಎಂದರೆ ಗ್ರಾಮ ನಕಾಶೆಯಲ್ಲಿ ತೋರಿಸಿದಂತೆ ಕಾಲುದಾರಿ ಎಂದರೆ 3 ಮೀಟರ್ 3 ಇಂಚು ಅಗಲದ ರಸ್ತೆ ಎಂದರೆ ಸರಿಯಲ್ಲ. ನಾನು ಯಂಭತ್ನಾಳ ಗ್ರಾಮದ ಗ್ರಾಮ ನಕಾಶೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಅದು ಯಾವ ವರ್ಷದಲ್ಲಿ ತಯಾರಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಜಮೀನಿನಲ್ಲಿ ಇರುವ ಕಾಲುದಾರಿಯನ್ನು ಪ್ರತಿವಾದಿಗಳು ಮತ್ತು ಗ್ರಾಮಸ್ಥರು ಬಳಸಲು ನನ್ನ ಅಭ್ಯಂತರವೇನಿಲ್ಲ. ಆದರೆ, ಸದರಿ ಕಾಲುದಾರಿ ಕೇವಲ 8 ಪೂಟ್ 3 ಇಂಚು ಇರುತ್ತದೆ ಅದನ್ನು ಕೇವಲ ಕಾಲುದಾರಿಯಾಗಿ ಮಾತ್ರ ಬಳಸಬೇಕು. ಸದರಿ ಕಾಲುದಾರಿ 3 ಮೀಟರ 3 ಇಂಚು ಇರುವುದರಿಂದ ಮತ್ತು ಕಾನೂನುಬದ್ದವಾಗಿ ಒಂದು ಕಾಲುದಾರಿ ಎಂದರೆ 3 ಮೀಟರ 3 ಇಂಚು ರಸ್ತೆಯಾಗಿದ್ದರಿಂದ ಸದರಿ ರಸ್ತೆಯಲ್ಲಿ ಚಕ್ಕಡಿ ಮತ್ತು ಟ್ರ್ಯಾಕ್ಟರಗಳನ್ನು ಕೂಡಾ ಸಾಗಿಸಬಹುದು ಎಂದರೆ ಸರಿಯಲ್ಲ.

**5.** ಯಂಭತ್ನಾಳ ಗ್ರಾಮದ ಗ್ರಾಮ ನಕಾಶೆಯು ಸನ್ 1947 ರ ಮುನ್ನವೇ ತಯಾರಿಸಿದ ಗ್ರಾಮ ನಕಾಶೆಯಾಗಿರುತ್ತದೆ ಎಂದರೆ ಇರಬಹುದು. ಈ ರೀತಿ ಗ್ರಾಮ ನಕಾಶೆಗಳನ್ನು ಕಂದಾಯ ದಾಖಲೆಗಳು ಎಂದು ಪರಿಗಣಿಸಿದ್ದರೂ ಕೂಡಾ ಪ್ರತಿ 30 ವರ್ಷಗಳಿಗೊಮ್ಮೆ ಬಳಕೆಯ ಆಧಾರದ ಮೇಲೆ ತಿದ್ದುಪಡಿ ಮಾಡಬಹುದಾಗಿರುತ್ತದೆ

ಎಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿರುವ ಕಾಲುದಾರಿ ಶಿವಣಗಿ ಮತ್ತು ಯಂಭತ್ನಾಳ ಗ್ರಾಮಕ್ಕೆ ಕನೆಕ್ಟ ಆಗುವ ರಸ್ತೆ ಎಂದರೆ ಸರಿ. ಸದರಿ ರಸ್ತೆಯು ಸದರಿ ಗ್ರಾಮಗಳಲ್ಲಿ ಜನವಸತಿ ಪ್ರಾರಂಭವಾದಾಗಿನಿಂದ ಇದೆ ಎಂದರೆ ಸರಿ. ಸದರಿ ರಸ್ತೆಯು ಹಾದುಹೋಗುವ ಎಲ್ಲಾ ಜಮೀನುಗಳು ವ್ಯವಸಾಯದ ಜಮೀನುಗಳ ಎಂದರೆ ಸರಿ. ಸದರಿ ರಸ್ತೆಯನ್ನು ಅಲ್ಲಿನ ಜಮೀನಿನಲ್ಲಿ ವ್ಯವಸಾಯ ಮಾಡಲು, ಹಾದುಹೋಗಲು ಬಳಸುತ್ತಾರೆ ಎಂದರೆ ಸರಿಯಲ್ಲ.

**6.** ಸದರಿ ರಸ್ತೆಯು, ಅಲ್ಲಿರುವ ಜಮೀನುಗಳಿಗೆ ಹೋಗಿಬರಲು ಒಂದೇ ರಸ್ತೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ತೇಜಸ್ವಿನಿ ಸೊಗಲದ)**
**ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,**
**ಬಸವನ ಬಾಗೇವಾಡಿ.**